**ದಿನಾಂಕಃ 29-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ_ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ.ಬಿ.ಹೆಚ್. ವಕೀಲರಿಂದಃ**

11. 1 ನೇ ವಾದಿ ನನ್ನ ದೊಡ್ಡಪ್ಪ ಎಂದರೆ ಸರಿ. ಅವರಿಗೆ 4 ಜನ ಮಕ್ಕಳು. ಸದರಿ 4 ಜನ ಮಕ್ಕಳು ನನಗಿಂತ ದೊಡ್ಡವರು ಇದ್ದಾರೆ. ಸದರಿ 1 ನೇ ವಾದಿಯ ಮಗಳು ಸಾವಿತ್ರವ್ವ ನನಗಿಂತ ಚಿಕ್ಕವಳು. ಸದರಿ ಸಾವಿತ್ರವ್ವಳಿಗೆ ಮದುವೆಯಾದಾಗ ನನಗೆ 20 ವರ್ಷ ಇರಬಹುದು. ಸದರಿಯವರ ಮದುವೆಯಾಗಿ ಈಗ 15 ವರ್ಷ ಕಳೆದಿವೆ. ಸದರಿಯವಳ ಮದುವೆ ಕಾಲಕ್ಕೆ ಅವಳಿಗೆ ನೀಡಿದ ಉಡುಗೋರೆಗಳ ಬಗ್ಗೆ ನನಗೆ ಮಾಹಿತಿ ಇದೆ. ಸದರಿಯವರ ಮದುವೆಯ ಸಮಯದಲ್ಲಿ ದಾವಾ ಜಮೀನುಗಳನ್ನು 1 ನೇ ಪ್ರತಿವಾದಿಯಾದ ಹನುಮಂತಪ್ಪರವರ ಹೆಸರಿಗೆ ಮಾಡಿಕೊಡುತ್ತೇನೆ ಎಂದು 1 ನೇ ವಾದಿಯಾದ ಬಸವಂತಪ್ಪರವರು ಈ ಮೊದಲೇ ಹೇಳಿದ್ದರಿಂದ ಸದರಿ ಸಾವಿತ್ರವ್ವರವರ ಮದುವೆ ಖರ್ಚನ್ನು 1 ನೇ ಪ್ರತಿವಾದಿಯೇ ಭರಿಸಬೇಕು ಎಂದು 1 ನೇ ವಾದಿ ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮದುವೆಯ ಖರ್ಚನ್ನು 1 ನೇ ವಾದಿಯೇ ಮಾಡಿರುತ್ತಾರೆ ಎನ್ನುತ್ತಾರೆ.

12. ಸದರಿ ಸಾವಿತ್ರವ್ವರವರಿಗೆ ವರೋಪಚಾರ ಎಂದು 2 ತೋಲೆ ಬಂಗಾರ ಹಾಗೂ ರೂ. 20,000/- ನಗದನ್ನು 1 ನೇ ಪ್ರತಿವಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾವಿತ್ರವ್ವರವರ ಮದುವೆಯ ಎಲ್ಲ ಖರ್ಚುಗಳನ್ನು 1 ನೇ ಪ್ರತಿವಾದಿಯವರು ನೀಡಿರುತ್ತಾರೆ ಎಂದು ನನಗೆ ಗೊತ್ತಿದ್ದರೂ ಸಹ 1 ನೇ ವಾದಿ ಖರ್ಚು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರ್ಚನ್ನು 1 ನೇ ಪ್ರತಿವಾದಿ ಮಾಡಿರುತ್ತಾರೆ ಎಂದು ಹೇಳಿದರೆ ಈ ದಾವೆಗೆ

ಅನಾನುಕೂಲವಾಗುತ್ತದೆ ಎಂದು ತಿಳಿದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. 3 ನೇ ವಾದಿಯ ಗಂಡ ಭರಮಪ್ಪ ನನಗೆ ದೊಡ್ಡಪ್ಪ ಎಂದರೆ ಸರಿ. ಸದರ ಭರಮಪ್ಪನ ಮಕ್ಕಳು ನನಗಿಂತ ಚಿಕ್ಕವರು. ಸದರಿಯವರು ನನಗಿಂತ 2-3 ವರ್ಷ ಚಿಕ್ಕವರು. ಸದರಿ ಭರಮಪ್ಪರವರಿಗೆ ಪುಟ್ಟವ್ವ ಎಂಬ ಮಗಳು ಇದ್ದಾರೆ ಎಂದರೆ ಸರಿ. ಸದರಿ ನನ್ನ ತಂದೆ ಮತ್ತು ದೊಡ್ಡಪ್ಪಂದಿರ ಮಧ್ಯೆ ಆದ ವಾಟ್ನಿ ಸಮಯದಲ್ಲಿ 4 ನೇ ವಾದಿಗೂ ಸಹ ಅವಳ ಮದುವೆ ಕಾಲಕ್ಕೆ 1 ತೊಲೆ ಬಂಗಾರ ಮತ್ತು ರೂ.10,000/- ವರೋಪಚಾರ ನೀಡಬೇಕೆಂಬ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ವಾಟ್ನಿ ಆಗಿಲ್ಲ ಹಾಗೂ ವರೋಪಚಾರ ಸಹ ನೀಡಿಲ್ಲ ಎನ್ನುತ್ತಾರೆ. ಸದರಿ ವರೋಪಚಾರ ನೀಡಿದ್ದರೂ ಹಾಗೂ ಅಪ್ಪಾಸ ವಾಟ್ನಿ ಆಗಿದ್ದರೂ ಆಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. 7 ನೇ ವಾದಿ ಸುಮಿತ್ರವ್ವ ನನ್ನ ಅಕ್ಕ ಸದರಿ 7 ನೇ ವಾದಿಯ ಮದುವೆಯ ಕಾಲಕ್ಕೆ 1 ನೇ ಪ್ರತಿವಾದಿ 2 ತೊಲೆ ಬಂಗಾರ ಹಾಗೂ ರೂ.18,000/- ನಗದು ವರೋಪಚಾರವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರ ಮದುವೆಯನ್ನು ನಾನು ಹಾಗೂ ನನ್ನ ತಂದೆ-ತಾಯಿ ಖರ್ಚು ಮಾಡಿ ಮಾಡಿರುತ್ತೇವೆ ಎನ್ನುತ್ತಾರೆ. 4 ನೇ ವಾದಿಯ ಸಾಕ್ಷ್ಯವನ್ನು ಮಾಡಿಸಿದರೆ ಸದರಿ 1 ನೇ ಪ್ರತಿವಾದಿ ಖರ್ಚು ಮಾಡಿದ ವಿಷಯ ಬೆಳಕಿಗೆ ಬರುತ್ತದೆ ಎಂದು ತಿಳಿದು ಅವರ ಸಾಕ್ಷ್ಯವನ್ನು ನಾನು ಮಾಡಿಸಿಲ್ಲ ಎಂದರೆ ಸಾಕ್ಷಿ 4 ನೇ ವಾದಿಯ ತಲೆ ಸರಿಯಿಲ್ಲ ಎನ್ನುತ್ತಾರೆ. ಸದರಿ 4 ನೇ ವಾದಿಯ ತಲೆ ಸರಿಯಿಲ್ಲದಿದ್ದರಿಂದ ಅವಳು ಏನು ಮಾಡುತ್ತಾಳೆ ಅವಳಿಗೆ ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ಒಂದೊಂದು ಬಾರಿ ಸರಿಯಾಗಿ ಮಾತನಾಡುತ್ತಾಳೆ ಹಾಗೂ ಮತ್ತೊಂದು ಬಾರಿ ಸರಿಯಾಗಿ ಮಾತನಾಡುವುದಿಲ್ಲ ಎನ್ನುತ್ತಾರೆ. ಸದರಿ 4 ನೇ ವಾದಿಯ ತಲೆ ಸರಿಯಿಲ್ಲದಿದ್ದರಿಂದ ಸದರಿಯವಳಿಗೆ ಯಾವ ದಾಖಲೆಗೆ ಸಹಿ ಮಾಡುತ್ತಿದ್ದೇನೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ.

15. ಈ ದಾವೆ ದಾಖಲಿಸುವ ಕಾಲಕ್ಕೆ 4 ನೇ ವಾದಿಯ ತಲೆ ಸರಿಯಿಲ್ಲ ಎಂದು ವಾದ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ ಆದರೆ ಅವಳಿಗೆ ಸಹಿ ಮಾಡು ಎಂದು ಹೇಳಿದ್ದರಿಂದ ಅವಳು ಸಹಿ ಮಾಡಿರುತ್ತಾಳೆ. ಮಾನಸಿಕ ಅಸ್ವಸ್ಥರಾದವರಿಗೆ ಸಂರಕ್ಷಣಾದಾರರನ್ನು ನೇಮಿಸಬೇಕಾಗುತ್ತದೆ ಎಂಬ ಮಾಹಿತಿ ನನಗೆ ಇಲ್ಲ. ಸದರಿ 4 ನೇ ವಾದಿ ಮಾನಸಿಕ ಅಸ್ವಸ್ಥ ಇದ್ದ ಬಗ್ಗೆ ಈ ದಾವೆ ದಾಖಲಿಸುವ ಕಾಲಕ್ಕೆ ನಾವು ವಕೀಲರಿಗೆ ಮಾಹಿತಿ ನೀಡಿರಲಿಲ್ಲ. ಸದರಿ 4 ನೇ ವಾದಿಯ ಸಹಿಯನ್ನು ಸೃಷ್ಟಿಸಿ ಈ ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬನ್ನಿಹಟ್ಟಿ ಗ್ರಾಮದ ಆಸ್ತಿಗಳನ್ನು ತಾನು ಪಡೆದು ಹಾಗೂ ಕಲ್ಲೇದೇವರು ಗ್ರಾಮದ ಆಸ್ತಿಗಳನ್ನು ನಮಗೆ ನೀಡಿದ್ದು ಆದರೂ ಸಹ ಬನ್ನಿಹಟ್ಟಿ ಗ್ರಾಮದ 1 ನೇ ಪ್ರತಿವಾದಿಯ ಹಿಸ್ಸೆಗೆ ಹೋದ ಜಮೀನುಗಳಲ್ಲಿ ಪಾಲು ಕೇಳಿ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ವಾದಿ ಮತ್ತು ಪ್ರತಿವಾದಿಯರ ಮೂಲ ಪುರುಷ ಭೀಮಪ್ಪ ಎಂದರೆ ಸರಿ. ಆತನಿಗೆ 3 ಜನ ಮಕ್ಕಳು. ಅವರೆಂದರೆ- ತಿರಕಪ್ಪ, ತಿಪ್ಪಣ್ಣ ಮತ್ತು ಹೊನ್ನಪ್ಪ. ಸದರಿಯವರ ಪೈಕಿ ತಿಪ್ಪಣ್ಣರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿ ತಿಪ್ಪಣ್ಣನವರ ಹೆಂಡತಿಯ ತವರು ಮನೆ ಅಸುಂಡಿ ಎಂದರೆ ಸರಿ. ಸದರಿ ತಿಪ್ಪಣ್ಣ ಹಾಗೂ ಆತನ ಹೆಂಡತಿ ಅಸುಂಡಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬನ್ನಿಹಟ್ಟಿ ಗ್ರಾಮದಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಸದರಿ ತಿಪ್ಪಣ್ಣರವರೊಂದಿಗೆ ನನ್ನ ತಂದೆ ಮತ್ತು ದೊಡ್ಡಪ್ಪಂದಿರು ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆಂದು ಸದರಿ ತಿಪ್ಪಣ್ಣನನ್ನು ನನ್ನ ತಂದೆ ಮತ್ತು ದೊಡ್ಡಪ್ಪಂದಿರು ಜೋಪಾನ ಮಾಡಿರುತ್ತಾರೆ ಎನ್ನುತ್ತಾರೆ.

17. ಸದರಿ ತಿಪ್ಪಣ್ಣ ರವರು ತೀರಿಕೊಂಡಾಗ ನನಗೆ 17 ವರ್ಷ ವಯಸ್ಸು ಇತ್ತು. ಸದರಿ ತಿಪ್ಪಣ್ಣ ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ತಿಪ್ಪಣ್ಣ ತೀರಿಕೊಂಡಾಗ ನಾನು ಜನಿಸಿರಲಿಲ್ಲ ಎಂದರೆ

ಸರಿಯಲ್ಲ. ಸದರಿ ನನ್ನ ತಂದೆ ಹಾಗೂ ವಾದಿಯರು ಕಲ್ಲೇದೇವರು ಗ್ರಾಮದಲ್ಲಿ ವಾಸವಾಗಿದ್ದರಿಂದ ಸದರಿ ತಿಪ್ಪಣ್ಣರವರನ್ನು 1 ನೇ ಪ್ರತಿವಾದಿಯೇ ಜೋಪಾನ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹಾಗೂ ನನ್ನ ದೊಡ್ಡಪಂದಿರು ಸೇರಿ ಜೋಪಾನ ಮಾಡಿರುತ್ತಾರೆ ಎನ್ನುತ್ತಾರೆ.

18. ಮೂಾಲ ಪುರಷನ ಮಕ್ಕಳಾದ ತಿರಕಪ್ಪ, ತಿಪ್ಪಣ್ಣ ಮತ್ತು ಹೊನ್ನಪ್ಪರವರು ಮಾತನಾಡಿಕೊಂಡು ತಿಪ್ಪಣ್ಣರವರಿಗೆ ಮಕ್ಕಳು ಇಲ್ಲ ಆದ್ದರಿಂದ ಆತನನ್ನು ಜೋಪಾನ ಮಾಡಿದ ಹನುಮಂತಪ್ಪ ಅಂದರೆ 1 ನೇ ಪ್ರತಿವಾದಿಗೆ ಆತನ ಆಸ್ತಿಯನ್ನು ನೀಡಬೇಕು ಎಂದು ನಿರ್ಧರಿಸಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜ ತಿರಕಪ್ಪ ಅಂದರೆ ಮೂಲ ಪುರುಷನ 1 ನೇ ಮಗ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ನಾನು ಜನಿಸಿರಲಿಲ್ಲ. ಸದರಿ ಮೂಲ ಪುರುಷನ 3 ನೇ ಮಗ ಹೊನ್ನಪ್ಪ ಅಂದರೆ 2 ನೇ ಪ್ರತಿವಾದಿಯ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ತಿರಕಪ್ಪ, ತಿಪ್ಪಣ್ಣ, ಮತ್ತು ಹೊನ್ನಪ್ಪ ಜೀವಿತಾವಧಿಯಲ್ಲಿ ಏನು ನಿರ್ಧಾರ ಹಾಗೂ ಮಾತುಕತೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿದೆಯಾ ಎಂಬ ಪ್ರಶ್ನೇಗೆ ಸಾಕ್ಷಿ ಅವರು ಏನು ನಿದಾ೯ರ ಹಾಗೂ ಮಾತುಕತೆ ಮಾಡಿರಲಿಲ್ಲ ಎನ್ನುತ್ತಾರೆ. ಸದರಿ ಸಮಯದಲ್ಲಿ ನಾನು ಜನಿಸದೇ ಇರುವುದರಿಂದ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಸದರಿ ಮಾತುಕತೆ ಏನಾದರೂ ಆಗಿದ್ದೇ ಆದರೆ ನನ್ನ ತಂದೆ ನನಗೆ ಹೇಳುತ್ತಿದ್ದರು ಆ ರೀತಿ ಯಾವುದೇ ಮಾತುಕತೆ ಆಗದೇ ಇದುದ್ದರಿಂದ ಆ ಬಗ್ಗೆ ನನ್ನ ತಂದೆ ಹೇಳಿಲ್ಲ ಎನ್ನುತ್ತಾರೆ. ನನ್ನ ತಂದೆ ಆ ಬಗ್ಗೆ ನನಗೆ ಹೇಳಿದ್ದರೂ ಸಹ ಹೇಳಿಲ್ಲ ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಸದರಿ ಮೂಲ ಪುರುಷನ 3 ಜನ ಮಕ್ಕಳಲ್ಲಿ ಹಿಸ್ಸೆ ಆದ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸದರಿ ಹಿಸ್ಸೆ ಆದ ಬಗ್ಗೆ ನನಗೆ ಮಾಹಿತಿ ಇದೆ ಆದರೆ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ. ಸದರಿ ಹಿಸ್ಸಾ ಆಗದೇ ಇದುದ್ದರಿಂದ ಆ ಬಗ್ಗೆ ನಾನು ಯಾವುದೇ ದಾಖಲೆಗ ಹಾಜರು ಪಡಿಸಿಲ್ಲ ಎಂದರೆ ಪಂಚರ ಸಮಕ್ಷಮ

ಮೌಖಿಕವಾಗಿ ಹಿಸ್ಸಾ ಮಾಡಿಕೊಂಡಿದ್ದರು ಎನ್ನುತ್ತಾರೆ. ಮೌಖಿಕವಾಗಿ ಹಿಸ್ಸೆ ಮಾಡಿದರೆ ಆ ಬಗ್ಗೆ ಕಾಗದ ಪತ್ರ ಮಾಡುತ್ತಾರೆ ಎಂದರೆ ಈಗ ಮಾಡುತ್ತಾರೆ ಆಗ ಮಾಡುತ್ತಿರಲಿಲ್ಲ ಎನ್ನುತ್ತಾರೆ.

20. ಮೂಲ ಪುರುಷನ 3 ನೇ ಮಗ ಹೊನ್ನಪ್ಪ ತೀರಿಕೊಂಡ ನಂತರ ಆತನ ಹಿಸ್ಸೆಯ ಆಸ್ತಿಗಳಿಗೆ ಅವರ ವಾರಸುದಾರರ ಹೆಸರು ದಾಖಲಾಯಿತು ಎಂದರೆ ಸರಿ. ಸದರಿ ಹೊನ್ನಪ್ಪರವರ ಹಿಸ್ಸೆಗೆ ಬನ್ನಿಹಟ್ಟಿ ಗ್ರಾಮದ ಸರ್ವೆ ನಂ.13 ಜಮೀನು ಹೋಗಿದೆ. ಸದರಿ ಸರ್ವೆ ನಂ.13 ಜಮೀನು ಹೊನ್ನಪ್ಪರವರ ಹಿಸ್ಸೆಗೆ ಹೋಗಿದೆ ಎಂದು ತೋರಿಸುವ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ. ನಾನು ಹಾಜರು ಪಡಿಸಿದ ದಾವಾ ಜಮೀನುಗಳ ಉತಾರಗಳಲ್ಲಿ ಮೂಲ ಪುರುಷನ ಇಬ್ಬರು ಜನ ಮಕ್ಕಳಾದ ತಿರಕಪ್ಪ ಮತ್ತು ಹೊನ್ನಪ್ಪರವರ ವಾರಸುದಾರರ ಹೆಸರುಗಳನ್ನು ಜಂಟಿಯಾಗಿ ದಾಖಲಾಗಿವೆ ಎಂದರೆ ಸಾಕ್ಷಿ ವಾಟ್ನಿಯಾಗದ ಕಾರಣದಿಂದ ಜಂಟಿಯಾಗಿ ದಾಖಲಾಗಿವೆ ಎನ್ನುತ್ತಾರೆ. ಸದರಿ ತಿರಕಪ್ಪ ಮತ್ತು ಹೊನ್ನಪ್ಪರವರ ಆಸ್ತಿಗಳಲ್ಲಿ ವಾಟ್ನಿ ಆಗಿಲ್ಲ ಎಂರದೆ ಸರಿ. ಸಾಎಕ್ಷಿ ಮುಂದುವರೆದು 1 ನೇ ಪ್ರತಿವಾದಿ ವಾಟ್ನಿಗೆ ಬರದೇ ಇದುದ್ದದರಿಂದ ಈ ದಾವೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ.

21. 2 ನೇ ಪ್ರತಿವಾದಿ ನಮ್ಮ ಹಿಸ್ಸೆಗೆ ಬಂದ ಜಮೀನುಗಳಲ್ಲಿ ಆತನಿಗೆ ಯಾವುದೇ ಹಕ್ಕು ಇಲ್ಲ ಎಂದು ನಮಗೆ ದಾಖಲೆ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ಹೊನ್ನಪ್ಪನ ಮಗ ಭೀಮಪ್ಪ ಅಂದರೆ 2 ನೇ ಪ್ರತಿವಾದಿ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅವರು ಪ್ರತಿವಾದ ಪತ್ರ ಸಲ್ಲಿಸಿಲ್ಲ ಎನ್ನುತ್ತಾರೆ ನಾನು 2 ನೇ ಪ್ರತಿವಾದಿಯ ಸಹಿ ನೋಡಿರುತ್ತೇನೆ. ಸದರಿ 2 ನೇ ಪ್ರತಿವಾದಿ ಭೀಮಪ್ಪ ಹೊನ್ನಪ್ಪ ಬಸಣ್ಣನವರ ಎಂದು ಕನ್ನಡ ಭಾಷೆಯಲ್ಲಿ ಬರೆದು ಸಹಿ ಮಾಡುತ್ತಾನೆ. ಈ ಸಾಕ್ಷಿಗೆ 2 ನೇಪ್ರತಿವಾದಿಯ ಪ್ರತಿವಾದ ಪತ್ರವನ್ನು ತೋರಿಸಿದ್ದು ಅದರ ಮೇಲಿರುವ ಸಹಿ 2 ನೇ ಪ್ರತಿವಾದಿಯದ್ದು ಅಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಈ ದಾವೆಯಲ್ಲಿ ಬಂದು ಹಾಜರಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಬಂದು ನಮ್ಮ ಜಮೀನುಗಳಲ್ಲಿ ಆತನಿಗೆ ಯಾವುದೇ ಹಿಸ್ಸೆ ಇಲ್ಲ ಎಂದು ಬರೆದು ಕೊಟ್ಟು ಹೋಗಿರುತ್ತಾನೆ ಎನ್ನುತ್ತಾರೆ. ಆತ 2019-20 ನೇ ಸಾಲಿನಲ್ಲಿ ನ್ಯಾಯಾಲಯಕ್ಕೆ

ಬಂದಿದ್ದ ಎನ್ನುತ್ತಾರೆ. 2 ನೇ ಪ್ರತಿವಾದಿ ಆ ನಂತರ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ದಾವೆಯನ್ನು ನಾವು ನಡೆಸುಕೊಂಡು ಹೋಗುತ್ತಿದ್ದೇನೆ ಎನ್ನುತ್ತಾರೆ. 2 ನೇ ಪ್ರತಿವಾದಿ ವಕೀಲರನ್ನು ನೇಮಿಸಿಕೊಂಡಿಲ್ಲ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿ ಗೆಜ್ಜಿ ವಕೀಲರನ್ನು ನೇಮಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಮೂಲ ಪುರುಷನ 3 ಜನ ಮಕ್ಕಳ ಮದ್ಯೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹೊನ್ನಪ್ಪನ ಹೆಂಡತಿ ಹಾಗೂ ಮಗಳನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರ ಹಿಸ್ಸೆಯಲ್ಲಿ ಪಾಲು ಕೇಳಿಲ್ಲ ಆದ್ದರಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎನ್ನುತ್ತಾರೆ. ಸದರಿ 4 ನೇ ವಾದಿಯಮಾನಸಿಕ ಸ್ಥಿತಿ ಸರಿಯಾಗಿ ಇಲ್ಲದೇ ಇದುದ್ದರಿಂದ ಹಾಗೂ ಮೂಲ ಪುರುಷನ 3 ನೇ ಮಗನ ಹೆಂಡತಿ ಮತ್ತು ಮಗಳನ್ನು ಪಕ್ಷಗಾರನ್ನಾಗಿ ಮಾಡದೇ ಇದುದ್ದರಿಂದ ಈ ದಾವೆ ಕಾಯ್ದೆಯಲ್ಲಿ ನಿಲ್ಲಲಾಗದು ಎಂದರೆ ಸರಿಯಲ್ಲ.

22. ನನ್ನ ತಂದೆ ಹಾಗೂ 1 ನೇ ಪ್ರತಿವಾದಿಯ ಮದ್ಯೆ ಹಿಸ್ಸೆ ಆಗಿ ಕಲ್ಲೇದೇವರು ಗ್ರಾಮದ ಜಮಿನುಗಳನು ವಾದಿಯರಾದ ನಮಗೆ ಎಂದು ಹಾಗೂ ಬನ್ನಿಹಟ್ಟಿಗ್ರಾಮದ ಜಮೀನು 1 ನೇ ಪ್ರತಿವಾದಿಗೆ ಎಂದು ಪಂಚರ ಸಮಕ್ಷಮ ಈ ಮೊದಲು ಹಿಸ್ಸೆ ಆಗಿದ್ದರೂ ಸಹ ಬನ್ನಿಹಟ್ಟಿ ಗ್ರಾಮದ ಜಮೀನುಗಳ ಆರ್ ಟಿ ಸಿ ಗಳಲ್ಲಿ ನಮ್ಮ ಹೆಸರುಗಳು ದಾಖಲು ಇದುದ್ದನ್ನು ದುರುಪಯೋಗ ಪಡಿಸಿಕೊಂಡು ಹಿಸ್ಸೆ ಆಗಿಲ್ಲ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.